ಇ) ಮೇಲೆ ತಿಳಿಸಿದ ೨೩ ಮಂದಿ ಅಧೀಕ್ಷಕರಲ್ಲಿ ಪರಿಶಿಷ್ಟ ಜಾತಿ ಪಂಗಡ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧೀಕ್ಷಕರ ಸಂಖ್ಯೆ ಈ ಮುಂದೆ ತಿಳಿಸಿದ ರೀತಿ ಇದೆ.

ಪರಿಶಿಷ್ಟ ಜಾತಿ — (೩) ಅಧೀಕ್ಷಕರು.
ಪರಿಶಿಷ್ಟ ಪಂಗಡ — ಯಾರೂ ಇಲ್ಲ.

ಕಳೆದ ಮೂರು ವರ್ಷಗಳ ಆಯವ್ಯಯದಲ್ಲಿನ ಬೇಡಿಕೆಗಳ ಬಗ್ಗೆ

೪೫೬. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ವೈದ್ಯಕೀಯ ಪದವೀದರರಾಗಿ ಹೊರ ಬರುತ್ತಿರುವವರ ಸಂಖ್ಯೆ ಎಷ್ಟು ?

ಆ) ಈಗಾಗಲೇ ಪದವಿ ಪಡೆದು ನಿರುದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು ?

ಇ) ಮೇಲಿನ ವೈದ್ಯಕೀಯ ಪದವೀದರರಿಗೆ ಉದ್ಯೋಗ ಒದಗಿಸುವ ಯಾವ ಯಾವ ಯೋಜನೆಗಳನ್ನು ಸರ್ಕಾರದವರು ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೧೫೧.

ಆ) ೮೨೪.

ಇ) ಉದ್ಯೋಗ ದೊರಕಿಸುವ ಉದ್ದೇಶಕ್ಕಾಗಿಯೇ ಸದ್ಯದಲ್ಲಿ ಯಾವುದೇ ಯೋಜನೆ ಇರುವುದಿಲ್ಲ. ಆಗಿಂದಾಗ್ಗೆ ಪಂಜೂರಾಗುತ್ತಿರುವ ಹೊಸ ಆಸ್ಪತ್ರೆಗಳು ಮತ್ತು ಹಾಲಿ ಇರುವ ಆಸ್ಪತ್ರೆಗಳಲ್ಲಿ ಸೃಷ್ಟಿಸುವ ಹೊಸ ಹುದ್ದೆಗಳಿಗೆ ಹೊಸದಾಗಿ ಮಂಜೂರಾಗಿರುವ ಖಾಸಗಿ ಕಾಲೇಜುಗಳಿಗೆ ವೈದ್ಯರುಗಳ ಅವಶ್ಯ ಉದ್ಭವಿಸಿದಂತೆ ನೇಮಕಾತಿ ಅವಕಾಶಗಳಿರುತ್ತವೆ.

ಇಲಾಖೆಗಳು ಸರ್ಕಾರಕ್ಕೆ ಕೊಡಬೇಕಾಗಿರುವ ಬಾಕಿ

(೪೫೭) ಶ್ರೀ ಚಂದ್ರಕಾಂತಬೆಲ್ಲದ್ (ಧಾರವಾಡ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಕ್ಕೆ ರೂ. ೧೦ ಲಕ್ಷಕ್ಕಿಂತಲೂ ಹೆಚ್ಚು ಬಾಕಿ ಕೊಡಬೇಕಾಗಿರುವ ಇಲಾಖೆಗಳ ಹೆಸರುಗಳು ಯಾವುವು ಹಾಗೂ ಒಟ್ಟು ಮೊತ್ತವೆಷ್ಟು ?

ಆ) ಈ ಹಣವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣಹೆಗಡೆ (ಮುಖ್ಯಮಂತ್ರಿ).—

ಅ) ಇಲಾಖೆಗಳು ಸರ್ಕಾರಕ್ಕೆ ಕೊಡಬೇಕಾದ ಬಾಕಿಯಿಲ್ಲ. ತೆರಿಗೆದಾರರಿಂದ ಇಲಾಖೆಗಳು ವಸೂಲು ಮಾಡಬೇಕಾದ ಬಾಕಿಯಿದೆ.

ಆ) ತನ್ನ ಇಲಾಖೆಗಳಿಂದ ಸರ್ಕಾರವು ಹಣವನ್ನು ವಸೂಲು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇಲಾಖೆಗಳಲ್ಲಿನ ನೌಕರರ ಬಗ್ಗೆ

೪೫೮. ಚಂದ್ರಕಾಂತ ಬೆಲ್ಲ ದ್(ಧಾರವಾಡ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೩ನೇ ಸಾಲಿನಿಂದ ಆಯಾ ಇಲಾಖೆಯಲ್ಲಿಯ ಎಲ್ಲಾ ವಿವಿಧ ನೌಕರರ ಸಂಖ್ಯೆ ಹಾಗೂ ಅವರಿಗೆ ಆಯಾ ವರ್ಷದಲ್ಲಿ ಖರ್ಚು ಮಾಡಿದ ಒಟ್ಟು ಸಂಬಳ ಮತ್ತು ಸಂಭಾವನೆಯ ಮೊತ್ತವೆಷ್ಟು ?

(ಇಲಾಖಾವಾರು ವಿವರಗಳನ್ನು ಒದಗಿಸಬೇಕು)